**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **73/2019**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **06**
ಸಿ.ಡಬ್ಲ್ಯೂ ನಂಃ **09**
ಸಾಕ್ಷಿಯನ್ನು ದಿನಾಂಕಃ **09-07-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಲೀಂಸಾಬ |
| ತಂದೆಯ ಹೆಸರು | ಃ | ರಾಜಾಸಾಬ |
| ವಯಸ್ಸು | ಃ | **45** ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ದಮ್ಮೂರು |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನನಗೆ ಚಾಸಾ **1** ಗೊತ್ತು. ಅವರು ನನ್ನ ಅಣ್ಣ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳನ್ನು ನಾನು ಈ ಹಿಂದೆ ಠಾಣೆಯಲ್ಲಾಗಲೀ ಅಥವಾ ಬೇರೆ ಕಡೆ ನೋಡಿಲ್ಲ. **2018** ರಲ್ಲಿ ಚಾಸಾ **1** ಏನು ಬೆಳೆದಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ಜಮೀನಿನಲ್ಲಿ ಗಂಧದ ಗಿಡ ಬೆಳೆಸಿರುವುದನ್ನು ನಾನು ನೋಡಿಲ್ಲ. ಅವರ ಜಮೀನಿನಲ್ಲಿ ಒಂದು ಗಂಧದ ಮರ ಕಳುವಾಗಿದೆ ಎಂಬ ವಿಚಾರ ಚಾಸಾ **1** ನನಗೆ ಹೇಳಿರಲಿಲ್ಲ ಹಾಗೂ ನಾನು ಆ ಜಮೀನಿಗೆ ಹೋಗಿ ನೋಡಿರಲಿಲ್ಲ. ಈ ವಿಚಾರದಲ್ಲಿ ಚಾಸಾ **1** ದೂರು ಕೊಟ್ಟಿರುವುದು ಮತ್ತು ಪಂಚನಾಮೆ ಜರುಗಿಸಿರುವುದು ನನಗೆ ಗೊತ್ತಿಲ್ಲ. ನನ್ನನ್ನು ಮತ್ತು ಚಾಸಾ **1** ರವರನ್ನು ಪೋಲೀಸ ಠಾಣೆಗೆ ಕರೆಸಿ ಗಂಧದ ತುಂಡುಗಳು ಮತ್ತು ಆರೋಪಿಗಳನ್ನು ತೋರಿಸಿರಲಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಮತ್ತು ಪುರವಣಿ ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ :

**2). 2018** ರಲ್ಲಿ ಚಾಸಾ **1** ರವರ ಹೊಲದಲ್ಲಿ ಒಂದು ಗಂಧದ ಗಿಡ ಕಳ್ಳತನ ಮಾಡಿರುತ್ತಾರೆಎಂಬ ವಿಚಾರ ಗೊತ್ತಾಗಿ ನಾನು ಹೋಗಿ ನೋಡಿದಾಗ ಆ ವಿಚಾರ ನಿಜ ಇತ್ತು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ನಮ್ಮ ಅಣ್ಣ ಪೂಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿ: **25-03-2018** ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆದರು ಎಂದರೆ ಸರಿಯಲ್ಲ. ಆಗ ನಾನು, ಚಾಸಾ **1, 7, 8** ಮತ್ತು **10** ಠಾಣೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಠಾಣೆಗೆ ಹೋದಾಗ ಗಂಧದ ತುಂಡುಗಳು ಮತ್ತು ಅದನ್ನು ಕಳುವು ಮಾಡಿದ ಆರೋಪಿಗಳನ್ನು ನಮಗೆ ತೋರಿಸಿದರು ಎಂದರೆ ಸರಿಯಲ್ಲ. "ಮೇಲ್ಕಾಣಿಸಿದ . . . . ಫಿರ್ಯಾದಿ ಸಲ್ಲಿಸಿರುವರು '' ಎಂದು ನಿಪಿ **12** ರೀತ್ಯ ಹೇಳಿಕೆ ಹಾಗೂ "ಮೊನ್ನೆ ದಿನಾಂಕ . . . . ಅಂತಾ ತಿಳಿಯಿತು'' ಎಂಬ ನಿಪಿ **13** ರೀತ್ಯ ಪುರವಣಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**ಎಸ್ .ಸಿ. ನಂಃ 73/2019**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **05**
ಸಿ.ಡಬ್ಲ್ಯೂ ನಂಃ **08**
ಸಾಕ್ಷಿಯನ್ನು ದಿನಾಂಕಃ **09-07-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ನಜೀರ ಸಾಬ |
| ತಂದೆಯ ಹೆಸರು | ಃ | ಅಮೀನಸಾಬ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ದಮ್ಮೂರು |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನನಗೆ ಚಾಸಾ 1 ಗೊತ್ತು. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳನ್ನು ನಾನು ಈ ಹಿಂದೆ ಠಾಣೆಯಲ್ಲಾಗಲೀ ಅಥವಾ ಬೇರೆ ಕಡೆ ನೋಡಿಲ್ಲ. 2018 ರಲ್ಲಿ ಚಾಸಾ 1 ಏನು ಬೆಳೆದಿದ್ದರು ಎಂದು ನಾನು ನೋಡಿಲ್ಲ. ಅವರ ಜಮೀನಿಗೆ ನಾನು ಕೂಲಿ ಕೆಲಸ ಮಾಡಲು ಹೋಗಿದ್ದೆ. ಆರದೆ ಗಂಧದ ಗಿಡ ಬೆಳೆಸಿರುವುದನ್ನು ನಾನು ನೋಡಿಲ್ಲ. ಅವರ ಜಮೀನಿನಲ್ಲಿ ಒಂದು ಗಂಧದ ಮರ ಕಳುವಾಗಿದೆ ಎಂಬ ವಿಚಾರ ತಿಳಿದು ನಾನು ಹೋಗಿ ನೋಡಿರಲಿಲ್ಲ. ಈ ವಿಚಾರದಲ್ಲಿ ಚಾಸಾ 1 ದೂರು ಕೊಟ್ಟಿರುವುದು ನನಗೆ ಗೊತ್ತಿಲ್ಲ. ನನ್ನನ್ನು ಪೋಲೀಸ ಠಾಣೆಗೆ ಕರೆಸಿ ಗಂಧದ ತುಂಡುಗಳು ಮತ್ತು ಆರೋಪಿಗಳನ್ನು ತೋರಿಸಿರಲಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಮತ್ತು ಪುರವಣಿ ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ

2). 2018 ರಲ್ಲಿ ಚಾಸಾ 1 ರವರ ಹೊಲದಲ್ಲಿ ಒಂದು ಗಂಧದ ಗಿಡ ಬೆಳೆಸಿದ್ದನ್ನು ನಾನು ಕೂಲಿ ಕೆಲಸಕ್ಕೆ ಹೋದಾಗ ನೋಡಿದ್ದೆ ಎಂದರೆ ಸರಿಯಲ್ಲ. ಅವರ ಜಮೀನಿನ ಬದುವಿನಲ್ಲಿ ಯಾರೋ ಆ ಮರವನ್ನು ಕಡಿದು ಕಳ್ಳತನ ಮಾಡಿಕೊಂಡು ಹೋಗಿದ್ದ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ಚಾಸಾ 1 ಪೊಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ನನಗೆ

ಗೊತ್ತಿಲ್ಲ. ದಿ: **25-03-2018** ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆದರು ಎಂದರೆ ಸರಿಯಲ್ಲ. ಆಗ ನಾನು, ಚಾಸಾ **1, 7, 9** ಮತ್ತು **10** ಠಾಣೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಠಾಣೆಗೆ ಹೋದಾಗ ಗಂಧದ ತುಂಡುಗಳು ಮತ್ತು ಅದನ್ನು ಕಳುವು ಮಾಡಿದ ಆರೋಪಿಗಳನ್ನು ನಮಗೆ ತೋರಿಸಿದರು ಎಂದರೆ ಸರಿಯಲ್ಲ. "ಮೇಲ್ಕಾಣಿಸಿದ . . . . ಫಿರ್ಯಾದಿ ಸಲ್ಲಿಸಿರುವರು " ಎಂದು ನಿಪಿ **10** ರೀತ್ಯ ಹೇಳಿಕೆ ಹಾಗೂ "ಮೊನ್ನೆ ದಿನಾಂಕ . . . . ಅಂತಾ ತಿಳಿಯಿತು" ಎಂಬ ನಿಪಿ **11** ರೀತ್ಯ ಪುರವಣಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**ಎಸ್ .ಸಿ. ನಂಃ 73/2019**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **04**
ಸಿ.ಡಬ್ಲ್ಯೂ ನಂಃ **07**
ಸಾಕ್ಷಿಯನ್ನು ದಿನಾಂಕಃ **09-07-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಹನುಮಪ್ಪ
ತಂದೆಯ ಹೆಸರು ಃ ಪರಸಪ್ಪ
ವಯಸ್ಸು ಃ **54** ವರ್ಷ
ಉದ್ಯೋಗ ಃ ಒಕ್ಕಲುತನ
ವಾಸ ಸ್ಥಳ ಃ ದಮ್ಮೂರು

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನನಗೆ ಚಾಸಾ **1** ಗೊತ್ತು. ನಮ್ಮ ಜಮೀನುಗಳು ದಮ್ಮೂರ ಸೀಮಾದಲ್ಲಿವೆ. ಚಾಸಾ **1** ರವರ ಜಮೀನಿನಲ್ಲಿ ಯಾವ ಗಿಡಗಳನ್ನು ಬೆಳೆದಿದ್ದರು ಎಂದು ನನಗೆ ಗೊತ್ತಿಲ್ಲ. ತಮ್ಮ ಜಮೀನಿನಲ್ಲಿ ಒಂದು ಗಂಧದ ಮರ ಕಳುವಾಗಿದೆ ಎಂಬ ವಿಚಾರ ನನಗೆ ಹೇಳಿರಲಿಲ್ಲ. ಅವರ ಹೊಲಕ್ಕೆ ನಾನು ಹೋಗಿ ಗಿಡ ಕಡಿದಿದ್ದನ್ನು ನಾನು ನೋಡಿಲ್ಲ. ನನ್ನನ್ನು ಪೋಲೀಸ ಠಾಣೆಗೆ ಕರೆಸಿರಲಿಲ್ಲ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತಿಲ್ಲ, ಠಾಣೆಯಲ್ಲಿ ನಾನು ಅವರನ್ನು ನೋಡಿಲ್ಲ. ಪೊಲೀಸರು ನನಗೆ ಠಾಣೆಯಲ್ಲಿ ಗಂಧದ ತುಂಡುಗಳನ್ನು ತೋರಿಸಿ ಆರೋಪಿಗಳು ಕಳುವು ಮಾಡಿದ್ದರು ಎಂಬ ವಿಚಾರ ತಿಳಿಸಿರಲಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಮತ್ತು ಪುರವಣಿ ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ

**2).** ಚಾಸಾ **1** ರವರ ಹೊಲದಲ್ಲಿ ಒಂದು ಗಂಧದ ಗಿಡ ಬೆಳೆಸಿದ್ದನ್ನು ನಾನು ನೋಡಿದ್ದೆ ಎಂದರೆ ಸರಿಯಲ್ಲ. ಯಾರೋ ಆ ಮರವನ್ನು ಕಡಿದು ಕಳ್ಳತನ ಮಾಡಿಕೊಂಡು ಹೋಗಿದ್ದ ವಿಚಾರ ಗೊತ್ತಾದಾಗ ನಾನು ಆ ಜಾಗಕ್ಕೆ ಹೋಗಿ ನೋಡಿದ್ದೆ ಎಂದರೆ ಸರಿಯಲ್ಲ. ಕಳ್ಳತನ ವಿಚಾರದಲ್ಲಿ ಚಾಸಾ **1** ಪೊಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ **25-03-2018** ರಂದು ಗಂಧದ

ತುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಬನ್ನಿ ಎಂದು ನನ್ನನ್ನು ಠಾಣೆಗೆ ಕರೆದರು ಎಂದರೆ ಸರಿಯಲ್ಲ. ಆಗ ನಾನು, ಚಾಸಾ **1, 8** ರಿಂದ **10** ಠಾಣೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಠಾಣೆಗೆ ಹೋದಾಗ ಗಂಧದ ತುಂಡುಗಳು ಮತ್ತು ಅದನ್ನು ಕಳುವು ಮಾಡಿದ ಆರೋಪಿಗಳನ್ನು ನಮಗೆ ತೋರಿಸಿದರು ಎಂದರೆ ಸರಿಯಲ್ಲ. **"**ಮೇಲ್ಕಾಣಿಸಿದ . . . . ಫಿರ್ಯಾದಿ ಸಲ್ಲಿಸಿರುವವರು '' ಎಂದು ನಿಪಿ **8** ರೀತ್ಯ ಹೇಳಿಕೆ ಹಾಗೂ **"**ಮೊನ್ನೆ ದಿನಾಂಕ . . . . ಅಂತಾ ತಿಳಿಯಿತು'' ಎಂಬ ನಿಪಿ **9** ರೀತ್ಯ ಪುರವಣಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **73/2019**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **03**
ಸಿ.ಡಬ್ಲ್ಯೂ ನಂಃ **06**
ಸಾಕ್ಷಿಯನ್ನು ದಿನಾಂಕಃ **09-07-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಅಬ್ದುಲಸಾಬ |
| ತಂದೆಯ ಹೆಸರು | ಃ | ರಾಜಾಸಾಬ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ದಮ್ಮೂರು |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆಯನ್ನು ನಿಪಿ 6 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಸುಮಾರು ವರ್ಷಗಳ ಹಿಂದೆ ಆ ಸಹಿಯನ್ನು ಯಲಬುರ್ಗಾ ಪೊಲೀಸ ಠಾಣೆಯಲ್ಲಿ ಮಾಡಿದ್ದೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರಲಿಲ್ಲ. ಪೊಲೀಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ. ಆರೋಪಿ ಯಲ್ಲಪ್ಪನನ್ನು ನಾನು ನೋಡಿಲ್ಲ. ನಿಪಿ-6 ರಲ್ಲಿ ಎನು ಬರೆದಿದೆ ಎಂದು ಗೊತ್ತಿಲ್ಲ. ಸಹಿ ಮಾತ್ರ ಮಾಡಿಸಿಕೊಂಡರು. ಈಗ ನನಗೆ ತೋರಿಸಿದ ಫೋಟೋದಲ್ಲಿ ನಾನು ಕಾಣುತ್ತೇನೆ. ಸಾಕ್ಷಿದಾರರಿಗೆ ತೋರಿಸಿದ ಫೋಟೋವನ್ನು ನಿಪಿ 7 ಎಂದು ಗುರುತಿಸಲಾಯಿತು. ಆ ಫೋಟೋ ಎಲ್ಲಿ ಮತ್ತು ಏಕೆ ತೆಗೆದರು ಎಂದು ಗೊತ್ತಿಲ್ಲ. ಪೊಲೀಸರು ಏನು ಓದಿ ಹೇಳಿರಲಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ

**2).** ದಿಃ **30-03-2018** ರಂದು ಮಧ್ಯಾಹ್ನ ನನ್ನನ್ನು ಪೊಲೀಸ ಠಾಣೆಗೆ ಕರೆದಿದ್ದರು ಎಂದರೆ ಸರಿಯಲ್ಲ. ಆಗ ಠಾಣೆಯಲ್ಲಿ ಆರೋಪಿ ಯಲ್ಲಪ್ಪ ಇದ್ದುದನ್ನು ನಾನು ನೋಡಿದೆ ಎಂದರೆ ಸರಿಯಲ್ಲ. ಉಳಿದ ಆರೋಪಿತರ ಜೊತೆ ಸೇರಿ ದಮ್ಮೂರು ಸೀಮಾದಲ್ಲಿ ಗಂಧದ ಮರ ಕಳುವು ಮಾಡಿದ್ದು ಕರೆದುಕೊಂಡು ಹೋದರೆ ಜಾಗ ತೋರಿಸುವುದಾಗಿ ಹೇಳಿದ್ದ ಎಂದರೆ ಸರಿಯಲ್ಲ. ಆ ನಂತರ ನನ್ನನ್ನು ಮತ್ತು ಮತ್ತೊಬ್ಬ ಸಾಕ್ಷಿದಾರರಾದ ಹನುಮಪ್ಪ ಜೀಪನಲ್ಲಿ ಕರೆದುಕೊಂಡು ಹೋಗಿ ಇದೇ ಜಾಗದಿಂದ ಗಂಧದ ಮರ ಕಳುವು ಮಾಡಿದ್ದು ಎಂದು ಜಾಗ ತೋರಿಸಿದ ಎಂದರೆ ಸರಿಯಲ್ಲ. ಆಗ ಪೊಲೀಸರು ಮಧ್ಯಾಹ್ನ **2** ರಿಂದ **2-45** ರಂತೆ ನಿಪಿ **6** ರಂತೆ ಪಂಚನಾಮೆ ಮಾಡಿ ನಿಪಿ **7** ಫೊಟೋ ತೆಗೆದು ಓದಿ ಹೇಳಿದರು ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.